ಕಾಳಿಂಗ ನಾವಡರಂತಿದೆ ಎಂದು ತನಗೆ ತಾನೇ ನಿಕ್ಕಿ ಮಾಡಿಕೊಂಡ.

ಮೊಬೈಲಿನಲ್ಲಿ ಕಾಳಿಂಗ ನಾವಡರ ಹಳೆ ಪದ್ಯಗಳನ್ನೆಲ್ಲಾ ಕೇಳಿ ಇನ್ನಷ್ಟು ಅವರಂತೆಯೇ ಹಾಡುವ ಎಂದುಕೊಂಡು ಪದ್ಯಗಳನ್ನೆಲ್ಲಾ ಥೇಟ್ ಅನುಕರಣೆ ಮಾಡಲು ನೋಡಿದ. ಮುಂದಿನ ಬಯಲಾಟದಲ್ಲಿ, ಟೆಂಟು ಮೇಳದಲ್ಲಿ ಹಾಗೇ ಹಾಡಲು ತೊಡಗಿದ. ಹಾಡುತ್ತ ಹೋದಂತೆ ತಾನೂ ಕಾಳಿಂಗ ನಾವಡ, ತನ್ನೊಳಗೇ ಅವರು ಬಂದಿದ್ದಾರೆ, ತನ್ನ ಶೈಲಿ, ಕುಳಿತ ಭಂಗಿ, ತನ್ನ ಕಣ್ನೋಟ, ತನ್ನ ನಿಲುವು, ತನ್ನ ಚೆಲುವು ಎಲ್ಲವೂ ಕಾಳಿಂಗ ನಾವಡರಂತೇ ಇದೆ ಎನ್ನುವ ಭ್ರಮೆಯ ಜೇಡ ಅವನೊಳಗೆ ಬಲೆ ಕಟ್ಟಲು ಶುರು ಮಾಡಿತು. ಅವರಷ್ಟೇ ಖ್ಯಾತಿ ಪಡೆಯುತ್ತಿದ್ದೇನೆ, ಲೋಕವೆಲ್ಲಾ ನನ್ನ ಸ್ವರದಲ್ಲೇ ನಡೆಯುತ್ತಿದೆ ಎನ್ನುವ ಭ್ರಾಂತು ಅವನನ್ನು ಗಾಢವಾಗಿ ಆವರಿಸಿಕೊಳ್ಳತೊಡಗಿತು. ಆದರೆ ಗಿರಿಧರ ಯಾರನ್ನೂ ಅನುಕರಣೆ ಮಾಡಿ ಹಾಡಿದರೂ ಮೇಳದಲ್ಲಿ ತಾಸುಗಟ್ಟಲೇ ಹಾಡುವಾಗ ನಡುನಡುವೆ ಅನುಕರಣೆ ಬಿದ್ದುಹೋಗಿ, ಅವನ ಸ್ವಂತ ಸ್ವರವೇ ಕೇಳಿಸತೊಡಗಿತು. ಹಾಗೆ ಕೇಳಿಸಿದಾಗ ಅದನ್ನು ಸರಿ ಮಾಡಿಕೊಳ್ಳುವವನಂತೆ ಮತ್ತೆ ಅವನು ಅನುಕರಣೆ ಶುರುಮಾಡುತ್ತಿದ್ದ. ಪ್ರತೀ ಗಂಟೆ ಗಂಟೆಗೂ ಇವನ ಸ್ವರ ಬದಲಾಗತೊಡಗಿದಾಗ ನಿಜವಾದ ಕೇಳುಗರಿಗೂ ಇದೇನೋ ಅಭಾಸವಾದಂತೆ ಅಸಹಜ ಅನ್ನಿಸತೊಡಗಿತು. ಆದರೂ 'ವ್ಹಾ ವ್ಹಾ.. ನಾವಡ ನಾವಡ' ಅಂತ ಸಿಳ್ಳೆ ಕೇಕೆ ಹಾಕುವವರೇ ಜಾಸ್ತಿಯಾದಾಗ ಗಿರಿಧರನಿಗೆ ನಿಜಕ್ಕೂ ಕೊಂಬು ಮೂಡತೊಡಗಿತ್ತು. ತಾನು ಒಂದೇ ಆಟದಲ್ಲಿ ನಾವಡನಾಗೇಬಿಟ್ಟೇ ಅನ್ನಿಸತೊಡಗಿತು. ಆಟ ಎಲ್ಲಾ ಮುಗಿದ ಮೇಲೆ ಚೌಕಿಯಲ್ಲಿ ಇವನನ್ನು ಮಾತಾಡಿಸಲು, ಇವನ ಜೊತೆ ಫೋಟೊ ತೆಗೆಸಿಕೊಳ್ಳುವವರೂ ಜಾಸ್ತಿಯಾದರು. ಕೆಲವರು, 'ಥೇಟ್ ನಾವಡರನ್ನೇ ಕಂಡ ಹಾಗಾಯ್ತು' ಎಂದು ಮನತುಂಬಿ ಹೇಳಿದಾಗ ಇವನು ಬೆಣ್ಣೆಯಾಗುತ್ತಿದ್ದ. ಒಂದಿಬ್ಬರು ಮಾತ್ರ ಅಪರೂಪಕ್ಕೆ, 'ನಿಮ್ಮ ಸ್ವಂತ ಸ್ವರವೇ ಚೆಂದ, ಅನುಕರಣೆ ಮಾಡಬೇಡಿ' ಎಂದು ಸೂಚ್ಯವಾಗಿ ಹೇಳುತ್ತಿದ್ದರು. ಆಕಾಶದಲ್ಲಿ ತೇಲಿಕೊಂಡಿರುವವನಿಗೆ ಭೂಮಿಯ ಮಣ್ಣಿನ ಪರಿಮಳ ಹೇಗೆ ಗೊತ್ತಾಗಬೇಕು. ಇವನಿಗೆ ಅಂತಹ ಸಲಹೆಗಳು ಬೇಡವಾಗಿತ್ತು. ಬರೀ ಆಕಾಶಕ್ಕೇರಿಸುವ ಹೊಗಳಿಕೆಗಳಲ್ಲೇ ಕಳೆದೇ ಹೋದಾಗ. ಎಲ್ಲರಂತಿದ್ದರೆ ಬೆಲೆಯಿಲ್ಲ ಏನಾದರೂ ಗಿಮಿಕ್ ಮಾಡಬೇಕು, ಆಗಷ್ಟೇ ಜನರಿಗೆ ಖುಷಿ ಆಗ್ತದೆ ಎನ್ನುವ 'ಸತ್ಯ' ಅರಿತವನಂತೆ ಪ್ರತೀ ಆಟದಲ್ಲೂ ಜನರಿಗೆ ಇಷ್ಟವಾಗುವ ಹಾಗೇ ಪದ್ಯ ಉದ್ದ ಎಳಿಯುದೋ, ಜನ ತನ್ನನ್ನೇ ನೋಡುವಂತೆ ವಿಚಿತ್ರ ಧಾಟಿಯಲ್ಲಿ ಏನಾದ್ರೂ ಗಿಮಿಕ್ ಮಾಡುವುದೋ, ಕರುಣಾ ರಸ ಪದ್ಯಕ್ಕೆ ನಿಜವಾಗಲೂ ಅತ್ತಂತೆ ಹಾಡುವುದೋ ಇವನಿಗೆ ಬಹುಸುಲಭದ ದಾರಿಯಾಗಿ ಕಂಡಿದ್ದು ಅಚ್ಚರಿಯೇನಲ್ಲ. ಪ್ರತೀ ಊರಲ್ಲೂ ಇವನಿಗೆ ಸಿಗುವ ಮನ್ನಣೆ, ಜನಪ್ರಿಯತೆ, ಸಂಭಾವನೆ ಎಲ್ಲವೂ ಜಾಸ್ತಿಯಾಗುತ್ತಲೇ ಹೋಯಿತು.

ಒಮ್ಮೆ ಹೀಗೇ ಗಿರಿಧರ ರಂಗಕ್ಕೆ ಏರುವ ಮೊದಲು ಚೌಕಿಯ ಹೊರಗೆ ಒಬ್ಬನೇ ಕೂತಿರಬೇಕಾದರೆ, ಅವನ ಬಳಿ ಬಂದ ನಡುವಯಸ್ಸಿನ ಮನುಷ್ಯನೊಬ್ಬ, 'ನಾನು ನಿಮ್ಮ ದೊಡ್ಡ ಅಭಿಮಾನಿ. ನಿಮ್ಮ ಯಾವ ಆಟನೂ ತಪ್ಪುದಿಲ್ಲ, ಈ ಅಭಿಮಾನಿಯ ಪುಟ್ಟ ಕಾಣಿಕೆ ನೀವು ಸ್ವೀಕರಿಸ್ಲೇಬೇಕು' ಎಂದು ಜಗಜಗಿಸುವ ಪ್ಯಾಕೇಟ್ ಒಂದನ್ನು ಕೊಟ್ಟ, 'ನಿಮ್ಮ ರಾಗಕ್ಕೆ ಇದರಿಂದ ಇನ್ನಷ್ಟು ಉತ್ತೇಜನ ಬರ್ತದೆ' ಎಂದ.

'ಉಡುಗೊರೆ ಎಲ್ಲಾ ತಗೊಳ್ಳುದಿಲ್ಲ' ಎಂದು ಗಿರಿಧರನ ಬಾಯಿ ಹೇಳಿತಾದರೂ, ಮನಸ್ಸು ಅದನ್ನು ತಗೊಂಡು ಅದರೊಳಗೇನಿದೆ ಎಂದು ಇಣುಕುವ ಕೌತಕದಲ್ಲಿ ಬಿದ್ದಿತ್ತು. ಪ್ರಸನ್ನವಾದ ನಾಚಿಕೆಯಿಂದ, ನಿರ್ಮಲ ನಗುವಿನಿಂದ ಅದನ್ನು ತಗೊಂಡವನೇ, ಯಾರೂ ಇಲ್ಲದ ಜಾಗಕ್ಕೆ ಹೋಗಿ ಆ ಜಗಮಗಿಸುವ ಬಟ್ಟೆ ಪ್ಯಾಕೇಟನ್ನು ಕೌತುಕದಿಂದ ಬಿಡಿಸಿದ, ಅದರೊಳಗೆ ಹಸಿರಿನ ಬಾಟಲಿಯೊಂದು ತಾನೇ ನಕ್ಷತ್ರ ಎನ್ನುವಂತೆ ಹೊಳೆಯುತ್ತಿತ್ತು.

'ಹೋ ಸೆಂಟು' ಎಂದು ಪರಿಮಳ ಮೂಸಲು ನೋಡಿದ. ಅಂತದ್ದೇನೂ ಪರಿಮಳ ಹತ್ತಲಿಲ್ಲ. ಸೂಕ್ಷ್ಮವಾಗಿ ನೋಡಿದ. 'ಮೇಕರ್ ಮಾರ್ಕ್ ಅಮೆರಿಕನ್ ಬಿಯರ್' ಎಂದು ಬರೆದಿತ್ತು. ಒಂದು ಕ್ಷಣ ಹೌಹಾರಿ ಹೋದ. ಇದುವರೆಗೆ ಅವನು ಅಮಲು ಪದಾರ್ಥ ಮುಟ್ಟದವನಲ್ಲ, ಆದರೆ ಆ ಮಿರಿಮಿರಿ ಮಿರುಗುವ ಬಾಟಲಿ, ಅದರಲ್ಲಿರುವ ಅಮೆರಿಕನ್ ಎನ್ನುವ ಪದಕ್ಕೆ ಸಮ್ಮೋಹಿತನಾದ. ನಿಮ್ಮ ರಾಗಕ್ಕೆ